ಆ)

ವರ್ಷ	(ರೂ. ಲಕ್ಷಗಳಲ್ಲಿ
2008–09	ಯಾವುದೂ ಇಲ್ಲ
2009–10	89.284.00
2010–11	71.427.00
2011–12	3,73,749.00

ಸದರಿ ವಿಧಾನಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸಲ್ಪಡದ ಕಾರಣ ಯಾವುದೇ ವೆಚ್ಚ ಉಂಟಾಗಿರುವುದಿಲ್ಲ.

ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 106 (455)

ಸದಸ್ಯರ ಹೆಸರು : ಶ್ರೀ ರಾಜಶೇಖರ ಬಸವರಾಜ ಪಾಟೀಲ್ (ಹುಮ್ನಾಬಾದ್)

ಉತ್ತರಿಸುವ ಸಚಿವರು : ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಪ್ರಶ್ನೆಗಳು:

ಅ) ಹುಮ್ನಾಬಾದ್ ತಾಲ್ಲೂಕಿಗೆ 2008 ರಿಂದ 2011ರವರೆಗೆ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ (ವಿವರ ನೀಡುವುದು)

ಆ) ಹುಮ್ನಾಬಾದ್ ಕ್ಷೇತ್ರದ ವ್ಯಾಪ್ತಿಯ ಬಸವಕಲ್ಯಾಣ ತಾಲ್ಲೂಕಿಗೆ ಸುಮಾರು ಹಳ್ಳಿಗಳು ಬರುತ್ತಿದ್ದು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯಲ್ಲಿ ಎಷ್ಟು ಗ್ರಾಮಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ; ಯಾವ ಯಾವ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. ಈ ಯೋಜನೆಯಲ್ಲಿ ಹರಿಜನ ವಾರ್ಡ್‌ಗಳಿಗೂ ಈ ಸೌಲಭ್ಯ ಒದಗಿಸಲಾಗಿದೆಯೇ? (ವಿವರ ನೀಡುವುದು)

ಇ) ಈ ಯೋಜನೆಯಲ್ಲಿ ಹುಮ್ನಾಬಾದ್ ತಾಲ್ಲೂಕಿಗೆ ಆಯ್ಕೆಯಾದ

ಗ್ರಾಮಗಳ ಕಾಮಗಾರಿ ಯಾವ ಹಂತದಲ್ಲಿದೆ? ಒಂದು ವೇಳೆ ಆಯ್ಕೆ ಮಾಡದೇ ಇದ್ದಲ್ಲಿ ಈ ಕೂಡಲೇ ಹಿಂದುಳಿದ ಗ್ರಾಮಗಳಿಗೆ ಈ ಯೋಜನೆ ಅಡಿಯಲ್ಲಿ ಅನುದಾನ ಮಂಜೂರು ಮಾಡಿ, ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಉತ್ತರಗಳು:

ಅ) ಹುಮ್ನಾಬಾದ್ ತಾಲ್ಲೂಕಿಗೆ 2008 ರಿಂದ 2011ರವರೆಗೆ ಗ್ರಾಮೀಣ ನೀರು ಸರಬರಾಜು ಯೋಜನೆಯಲ್ಲಿ ಅಡಿಯಲ್ಲಿ ಈ ಕೆಳಗಿನಂತೆ ಅನುದಾನ ಬಿಡುಗಡೆ ಮಾಡಿದ್ದು ಖರ್ಚು ಮಾಡಲಾಗಿದೆ.

ಕ್ರ. ಸಂ.	2008–09	2009–10	2010–11	2011–12
1.	147.279	225.447	207.62	151.50

ಆ) ಹುಮ್ನಾಬಾದ್ ಕ್ಷೇತ್ರದ ವ್ಯಾಪ್ತಿಯ ಬಸವಕಲ್ಯಾಣ ತಾಲ್ಲೂಕಿನ 37 ಗ್ರಾಮಗಳನ್ನು ಆಯ್ಕೆಮಾಡಲಾಗಿದೆ.

1. 2008 ರಲ್ಲಿ ಸದಲಾಪೂರ, ಹಣಮಂತವಾಡಿ, ಪಂಡರಗೇರಾ, ರೊಳ್ಳಾ, ಯರಬಾಗ ಗ್ರಾಮಗಳನ್ನು ಆಯ್ಕೆ ಮಾಡಿ ಕುಡಿಯುವ ನೀರು ಸರಬರಾಜು ಕಾಮಗಾರಿ ಪೂರ್ಣಗೊಳಿಸಲಾಗಿದೆ.
2. 2009ರಲ್ಲಿ ಹಂಡ್ರಿಯಾಳ ತಾಂಡಾ, ತಡೊಳಾ ತಾಂಡಾ, ಹರನಾಗಾಂವ, ಕೌಡಿಯಾಳ (ಆರ್), ನಿರಗುಡಿ, ರಾಜೇಶ್ವರ, ರಾಮಪುರವಾಡಿ, ಶಿವರಾಮ ತಾಂಡಾ ಗ್ರಾಮಗಳು ಆಯ್ಕೆ ಮಾಡಿ ಕಾಮಗಾರಿ ತೆಗೆದುಕೊಳ್ಳಲಾಗಿದೆ.
3. 2010 ರಲ್ಲಿ ರಾಮಪುರವಾಡಿ, ನಿರಗುಡಿ, ರಾಜೇಶ್ವರ ಗ್ರಾಮಗಳು ಆಯ್ಕೆ ಮಾಡಲಾಗಿದೆ.
4. 2011ರಲ್ಲಿ ಖೆರ್ಡಾ (ಬಿ), ಶಂಕರು ತಾಂಡಾ, ರಾಜೋಳಾ ತಾಂಡಾ, ಪಂಡರಗೇರಾ ತಾಂಡಾ, ದಾಸರವಾಡಿ, ಮೊಗ್ಗಾ, ಹಂಡ್ರಯಾಳ 9ಕ), ಯರಂಡಿ, ಧನಗರವಾಡಿ, ರೊಳ್ಳಾ, ಕಿಶನ ತಾಂಡಾ, ಘಾಟಾ ಹಿಪ್ಪರಗಾ, ಘಾಟಾ ಹಿಪ್ಪರಗಾ ತಾಂಡಾ,

ಖಾನಾಪೂರ (ಬಿ), ಬಂದನವಾಜ ವಾಡಿ, ಪಂಡರಗೇರಾ, ಸದಲಾಪುರ, ಯರಬಾಗ, ರಾಜೋಳಾ ಮತ್ತು ಲಿಂಗದಳ್ಳಿ ಗ್ರಾಮಗಳು ಆಯ್ಕೆ ಮಾಡಲಾಗಿದೆ.

ಸದರಿ ಕಾಮಗಾರಿಗಳಲ್ಲಿ ಅವಶ್ಯಕತೆಗನುಗುಣವಾಗಿ ಹರಿಜನ ವಾರ್ಡ್‌ಗಳಿಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗಿದೆ.

ಇ) ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ 2011–12ನೇ ಸಾಲಿನಲ್ಲಿ ಹುಮ್ನಾಬಾದ್ ತಾಲ್ಲೂಕಿನ 26 ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು, ಕಾಮಗಾರಿಗಳ ಅನುಷ್ಠಾನ ಪ್ರಕ್ರಿಯೆ ನಡೆದಿದೆ.

ಸರ್ವ ಶಿಕ್ಷಣ ಅಭಿಯಾನ ಯೋಜನೆಯ ದುರ್ಬಳಕೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 107 (456)

ಸದಸ್ಯರ ಹೆಸರು : ಶ್ರೀ ರಾಜಶೇಖರ ಬಸವರಾಜ ಪಾಟೀಲ್ (ಹುಮ್ನಾಬಾದ್)

ಉತ್ತರಿಸುವ ಸಚಿವರು : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಪ್ರಶ್ನೆಗಳು:

ಅ) ಸರ್ವ ಶೀಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಶಾಲೆಯಿಂದ ಹೊರಗುಳಿದ 6 ರಿಂದ 14 ವರ್ಷ ವಯಸ್ಸಿನ ಮಕ್ಕಳನ್ನು ಮತ್ತೆ ಮುಖ್ಯವಾಹಿನಿಗೆ ತರುವ ಸಂಬಂಧ 2008 ರಿಂದ 2011ರ ಅವಧಿಯಲ್ಲಿ BRC ಕೇಂದ್ರಗಳನ್ನು ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರ್ವ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಎಷ್ಟು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ (ವಿವರ ನೀಡುವುದು).

ಇ) ಒಂದು ತಾಲ್ಲೂಕಿಗೆ ಎಷ್ಟು BRC ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ;